ಅಧ್ಯಕ್ಷರು.—ನೀವು ಕಾಲಿಂಗ್ ಅಟೆನ್‌ಷನ್ ನೋಟೀಸ್ ಎಂದು ಕೊಟ್ಟರೂ ಕೂಡ ಅದನ್ನು ನಾವು ಸ್ಟಾರ್ಡ್ ಕೊಶ್ಚನ್ ಎಂದು ಕನ್‌ವರ್ಟ್ ಮಾಡಿರುತ್ತೇವೆ. ಏಕೆಂದರೆ ನಿಮಗೆ ವಿಚಿತವಾದ ಉತ್ತರ ಬರಲಿ ಎಂಬ ಉದ್ದೇಶದಿಂದ.

ಶ್ರೀ ಆರ್. ರಾಮಯ್ಯ.—ನಾನು ಕೊಟ್ಟಿರುವ ಪ್ರಶ್ನೆಯನ್ನು ನೋಡಿ ಸ್ವಾಮಿ,

ಅಧ್ಯಕ್ಷರು—ನೀವು ಆವರ ಹತ್ತಿರ ಹೋಗಿ ಮಾತನಾಡಿ. ನಿಮಗೆ ಈಗಾಗಲೇ 2-ಸಿ ಫಾರ್ ಕೊಟ್ಟಿದ್ದೇನೆ. ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಎಂ. ರಾಮಪ್ಪ.—ಮಾನ್ಯ ಅಧ್ಯಕ್ಷರೆ, ನೀವೇ ನಮ್ಮ ರಕ್ಷಣೆಗೆ ಬರಬೇಕು. ನೀವು ನಮಗೆ ರಕ್ಷಣೆ ಕೊಡದಿದ್ದರೆ ಹೇಗೆ?

ಅಧ್ಯಕ್ಷರು.—ಮಾನ್ಯ ಮಂತ್ರಿಗಳ ಹತ್ತಿರ ಹೋಗಿ ಡಿಸ್ಕಸ್ ಮಾಡಿ ಎಂದು ನಾನು ಅವರಿಗೆ ಹೇಳಿದ್ದೇನೆ. ನಾನೂ ಕೂಡ ಹಿಂದೆ ಶಾಸಕನಾಗಿದ್ದಾಗ ಇದೇ ರೀತಿ ಮಂತ್ರಿಗಳ ಹತ್ತಿರ ಕುಳಿತು ಚರ್ಚೆ ಮಾಡಿ ನನ್ನ ಕ್ಷೇತ್ರದ ಕೆಲಸವನ್ನು ಮಾಡಿಸಿಕೊಂಡಿದ್ದೇನೆ.

ಶ್ರೀ ಎನ್. ಎಂ. ಅಡ್ಯಂತಾಯ.—ನೀವು ಪ್ರತಿ ದಿನ ಹೇಳುವುದನ್ನು ನಾವು ಕೇಳುತ್ತಾ ಹೋದರೆ ನಮ್ಮ ಕ್ಷೇತ್ರದ ಕೆಲಸ ಏನೂ ಆಗುವುದಿಲ್ಲ. ನಾವು ಇಲ್ಲಿ ಕೂಡುವುದಕ್ಕೆ ಬದಲಾಗಿ ಆ ಕಡೆ ಕೂತುಕೊಳ್ಳುವುದಕ್ಕೆ ಅವಕಾಶವನ್ನು ಮಾಡಿ ಕೊಡಿ. ಅಲ್ಲಿ ಕೂತುಕೊಂಡು ನಮ್ಮ ಕೆಲಸವನ್ನು ಉಪಾಯದಿಂದ ಮಾಡಿಸಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ.

ಅಧ್ಯಕ್ಷರು.—ದಯವಿಟ್ಟು ತಾವು ಕುಳಿತುಕೊಳ್ಳಿ. ಇವತ್ತು ಮಧ್ಯಾಹ್ನ ಬಹಳ ದೊಡ್ಡ ಡಿಮ್ಯಾಂಡ್ಸ್ ಸಭೆಯ ಮುಂದೆ ಚರ್ಚೆಗೆ ಬರುತ್ತದೆ. ಮಾನ್ಯ ಮಂತ್ರಿಗಳ ಹತ್ತಿರ ಕುಳಿತು ಚರ್ಚೆ ಮಾಡುವಂತೆ ನಾನು ಅವರಿಗೆ ಹೇಳಿದ್ದೇನೆ.

## ಹರಪನಹಳ್ಳಿ ತಾಲ್ಲೂಕಿಗೆ ಸಂಸಜ್ಜಿತವಾದ ಸರಕಾರಿ ಆಸ್ಪತ್ರೆ

*1. ಶ್ರೀ ಬಿ. ಎಚ್. ಯಂಕಾನಾಯಕ್ (ಹರಪನಹಳ್ಳಿ).—ಮಾನ್ಯ ಆರೋಗ್ಯ ಮತ್ತು ಅಬಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬಳ್ಳಾರಿ ಜಿಲ್ಲೆಯಲ್ಲಿ ಹರಪನಹಳ್ಳಿ ತಾಲ್ಲೂಕಿನ ಜನಸಂಖ್ಯೆ ಸುಮಾರು ೪೦ ಸಾವಿರಕ್ಕೂ ಹೆಚ್ಚಿದ್ದು ಇಲ್ಲಿಂದು ಸುಸಜ್ಜಿತವಾದ ಸರ್ಕಾರಿ ಆಸ್ಪತ್ರೆ ಇಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹರಪನಹಳ್ಳಿಯಲ್ಲಿ ೫೦ ಹಾಸಿಗೆಗಳ ಆಸ್ಪತ್ರೆಯೊಂದನ್ನು ಪ್ರಾರಂಭಿಸಬೇಕೆಂದು ಸರ್ಕಾರದವರನ್ನು ಅಧಿವೇಶನದಲ್ಲಿ ಕೇಳಿದಾಗ್ಯಆದನ್ನು ಮುಂದಿನ ವರ್ಷ ಬಜೆಟ್‌ನಲ್ಲಿ ಸೇರಿಸಿ ಶೀಘ್ರದಲ್ಲಿಯೇ ಆಸ್ಪತ್ರೆಯನ್ನು ಪ್ರಾರಂಭಿಸುವುದಾಗಿ ಭರವಸೆ ನೀಡಿದ್ದು ನಿಜವಲ್ಲವೆ?

ಇ) ಈವರೆಗೂ ಆಸ್ಪತ್ರೆಯನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳದಿರಲು ಕಾರಣಗಳೇನು ?

ಈ) ಸರ್ಕಾರದವರು ಈಗಲಾದರೂ ಹರಪನಹಳ್ಳಿಯಲ್ಲಿ ೫೦ ಹಾಸಿಗೆಗಳ ಒಂದು ಸುಸಜ್ಜಿತ ಆಸ್ಪತ್ರೆಯನ್ನು ಪ್ರಾರಂಭಿಸುವರೇ ?

ಶ್ರೀ ಹೆಚ್. ಟಿ. ಕೃಷ್ಣಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು),—

ಅ) ಬಂದಿದೆ.

ಆ) ಮುಂಬರುವ ವರ್ಷಗಳಲ್ಲಿ ಈ ಆಸ್ಪತ್ರೆಯನ್ನು ೩೦ ಹಾಸಿಗೆಗಳ ಸಾರ್ವಜನಿಕ ಆಸ್ಪತ್ರೆಯಾಗಿ ಮೇಲ್ದರ್ಜೆಗೇರಿಸಲು ಕ್ರಮ ಕೈಗೊಳ್ಳುವುದಾಗಿ ತಿಳಿಸಲಾಗಿತ್ತು.

ಇ) ರಾಜ್ಯದಲ್ಲಿ ಈ ರೀತಿ ಮೇಲ್ದರ್ಜೆಗೇರಿಸಬೇಕಾದ ಳಿಷ ತಾಲ್ಲೂಕು ಮಟ್ಟದ ಆಸ್ಪತ್ರೆಗಳಿದ್ದು ಯೋಜನಾ ವೆಚ್ಚದ ಮಿತಿಯೊಂದಾಗಿ ಇದು ಸಾಧ್ಯವಾಗಿಲ್ಲ.

ಈ) ಹಣದ ಲಭ್ಯತೆಯನ್ನು ಗಮನದಲ್ಲಿಟ್ಟುಕೊಂಡು ಇದನ್ನು ಪರಿಶೀಲಿಸಲಾಗುವುದು.

ಶ್ರೀ ಬಿ. ಎಚ್. ಯಂಕಾನಾಯಕ್ — ಮಾನ್ಯ ಅಧ್ಯಕ್ಷರೇ, ಹರಪನಹಳ್ಳಿಯಲ್ಲಿ ೫೦ ಹಾಸಿಗೆಗಳ ಆಸ್ಪತ್ರೆಯನ್ನು ಸ್ಥಾಪಿಸುವ ಬಗ್ಗೆ ಹಿಂದೆ ಇದ್ದಂಥ ಆರೋಗ್ಯ ಸಚಿವರು ಒಪ್ಪಿಕೊಂಡಿದ್ದರು. ಮಾನ್ಯ ಮಾಜಿ ಮಂತ್ರಿಗಳಾದ ಪ್ರಕಾಶ್‌ರವರೂ ಕೂಡ ಒತ್ತಾಯ ಮಾಡಿ ಇದನ್ನು ಸರ್ಕಾರದ ಗಮನಕ್ಕೆ ತಂದಿದ್ದರು. ಪುರಸಭೆಯ ಅಧ್ಯಕ್ಷರು ಆಮರಣ ಉಪವಾಸ ಕುಳಿತಾಗ ಇದೇ ಮನೆಯಲ್ಲಿ ಮುಂದಿನ ಬಡ್ಜೆಟ್‌ನಲ್ಲಿ ಸೇರಿಸುವುದಾಗಿ ಸನ್ಮಾನ್ಯ ಮಂತ್ರಿಗಳಾದ ಲಕ್ಷ್ಮೀಸಾಗರ್‌ರವರು ಮತ್ತು ಮುಖ್ಯ ಮಂತ್ರಿಗಳು ಆಶ್ವಾಸನೆಯನ್ನು ಕೊಟ್ಟಿದ್ದರು. ಈಗ ಹರಪನಹಳ್ಳಿಯಿಂದ ೬೦ ಕಿಲೋಮೀಟರ್ ದೂರದಲ್ಲಿರುವಂಥ ಹೊಸಪೇಟೆಗಾಗಲಿ ಅಥವಾ ದಾವಣಗೆರೆಗಾಗಲಿ ಗರ್ಭಿಣಿಸ್ತ್ರೀಯರು ಮತ್ತು ಆಕಸ್ಮಿಕ ಅಪಘಾತಕ್ಕೆ ಒಳಗಾದವರೂ ಹೋಗಬೇಕಾಗಿರುತ್ತದೆ. ಆದ್ದರಿಂದ ದಯವಿಟ್ಟು ಈ ವರ್ಷ ವಾದರೂ ಆಸ್ಪತ್ರೆಯನ್ನು ಕೊಡತಕ್ಕಂಥ ಪ್ರಯತ್ನವನ್ನು ಮಾಡಬೇಕೆಂದು ಸರ್ಕಾರವನ್ನು ತಮ್ಮ ಮೂಲಕ ಒತ್ತಾಯಪಡಿಸಿ ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಟಿ. ಕೃಷ್ಣಪ್ಪ. ಮಾನ್ಯ ಅಧ್ಯಕ್ಷರೇ, ಈಗಾಗಲೇ ತಮಗೆ ತಿಳಿಸಿದ ಪ್ರಕಾರ ಳಿ ತಾಲ್ಲೂಕು ಮಟ್ಟದ ಆಸ್ಪತ್ರೆಗಳನ್ನು ೩೦-೫೦ ಹಾಸಿಗೆಗಳ ಮೇಲ್‌ದರ್ಜೆಗೆ ಏರಿಸಬೆ ಕು. ಎಂದು ತೀರ್ಮಾನ ತೆಗೆದುಕೊಂಡಿರುತ್ತೇವೆ. ಈಗ ೪೩ ಆಸ್ಪತ್ರೆಗಳು ಮಾತ್ರ ಉಳಿದಿರುತ್ತವೆ. ಹಣದ ಅನುಕೂಲತೆಯನ್ನು ನೋಡಿಕೊಂಡು ಹಂತಹಂತವಾಗಿ ಇವೆಲ್ಲವನ್ನು ಮುಗಿಸಿಕೊಡುತ್ತೇವೆಂದು ಹೇಳಿ ದ್ದೇನೆ ಆದ್ಯತೆಯ ಮೇರೆಗೆ ಇವರು ಅರ್ಜಿಯನ್ನು ಹೊಂದಿದ್ದರೆ ಈ ಆಸ್ಪತ್ರೆಯನ್ನು ಮೇಲ್ ದರ್ಜೆಗೆ ಏರಿಸುವುದಕ್ಕೆ ಲಿಕ್ಯಾಚಾರಹಾಕಿ ತೀರ್ಮಾನ ತೆಗೆದುಕೊಳ್ಳುತ್ತೇನೆ.

ಶ್ರೀ ಬಿ ಎಚ್ ಕಾಯಿಂನಾಯಕ್. ಮಾನ್ಯ ಆಧ ಕ್ಷರೇ. ಈ ಆಸ್ಪತ್ರೆಗಾಗಿ ಜಮೀನನ್ನು ಸಹ ಕೊಟ್ಟಿದ್ದರೆ ಸನ್ಮಾನ್ಯ ಮುಖ್ಯಮಂತ್ರಿಗಳು ಪ್ರಯತ್ನ ಮಾಡಿದರೆ ನಳೆಯೇ ಮಂಜೂರು ಮಾಡ ಬಹುದು. ಸರ್ಕಾರಕ್ಕೆ ಆಗುವುದಿಲ್ಲವೆಂದಲ್ಲ. ದಯವಿಟ್ಟು ಹಣವಿಲ್ಲವೆಂದು ಹೇಳಬೇಡಿ. ಸನ್ಮಾನ್ಯ ಮುಖ್ಯಮಂತ್ರಿಗಳನ್ನು ಮತ್ತು ಆರೋಗ್ಯ ಮಂತ್ರಿಗಳನ್ನು ಇನ್ನು ೩ ತಿಂಗಳು ಅಥವಾ ೬ ತಿಂಗಳಲ್ಲಿಯೇ ಮೇಲ್‌ದರ್ಜೆಯ ಆಸ್ಪತ್ರೆಯನ್ನು ಅಲ್ಲಿಗೆ ಮಂಜೂರು ಮಾಡಿ ಕೊಡುತ್ತಾರೆಯೆ ಎಂದು ನಾನು ಕೇಳಿಕೊಳ್ಳುತ್ತೇನೆ

ಶ್ರೀ ಎಚ್ ಟಿ. ಕೃಷ್ಣಪ್ಪ.— ಆದ್ಯತೆಯ ಆಧಾರದಮೇಲೆ ಕೆಲಸ ಕೈಗೊಳ್ಳಬೇಕಾಗಿದೆ. ಆದ್ಯತೆಯನ್ನು ಗುರುತಿಸುವ ಕೆಲಸಮಾಡಿ ಅರ್ಹತೆ ಇದ್ದರೆ ಯಾವ ತಾರತಮ್ಯವೂ ಇಲ್ಲದೆ ಆಸ್ಪತ್ರೆ ಯನ್ನು ಒದಗಿಸಿಕೊಡುತ್ತೇವೆಂದು ಹೇಳುತ್ತೇನೆ.

## ಮೂರನೇ ವೇತನ ಆಯೋಗದ ಬಗ್ಗೆ ನೌಕರರ ಅತೃಪ್ತಿ

೨೭೯. ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).— ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸರ್ಕಾರಿ ನೌಕರರಿಗೆ ಅನ್ವಯಿಸುವಂತೆ ಮೂರನೇ ವೇತನ ಆಯೋಗವು ಕೊಟ್ಟಿರುವ ವರದಿಯ ಬಗ್ಗೆ ಬಹು ಭಾಗ ನೌಕರರಲ್ಲಿ ಅತೃಪ್ತಿ ವ್ಯಕ್ತ ಪಡಿಸಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಈ ವರದಿಯ ಅಂಶಗಳನ್ನು ಬದಲಿಸಬೇಕೆಂದು ತಮ್ಮ ಕೇಳಿಕೆಗಳನ್ನು ನಿವೇದಿಸಿ ಪಡಿಸ ಬೇಕೆಂದು ಕೇಳಿರುವ ನೌಕರರ ಸಂಘಗಳೆಷ್ಟು ಹಾಗೂ ನೌಕರರೆಷ್ಟು ?

ಇ) ಸರ್ಕಾರಿ ನೌಕರರಿಗೆ ನ್ಯಾಯ ದೊರಕಲು ವೇತನ ಆಯೋಗದ ವರದಿಯಿಂದ ಉದ್ಭವಿಸಿರುವ ಸಮಸ್ಯೆಗಳನ್ನು ನಿವೇದಿಸಿ ಮಾಡಲು ಸರ್ಕಾರದವರು ಕೈಗೊಳ್ಳುವ ಹಾಗೂ ಕೈಗೊಂಡಿರುವ ಕ್ರಮ ಗಳೇನು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ಹೌದು.

ಆ) ನೌಕರರ ಸಂಘಗಳಿಂದ ... ೨೧೫
ನೌಕರರಿಂದ ... ೧೧,೩೫೦